ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 310
2) ಸದಸ್ಯರ ಹೆಸರು : ಶ್ರೀ ಹೆಚ್.ಎಂ.ರಮೇಶಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ : 03-02-2021
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	KFDC ನ್ನು ರಾಜ್ಯದಲ್ಲಿ ಯಾವಾಗ ಪ್ರಾರಂಭಿಸಲಾಯಿತು; KFDC ನ ಕಾರ್ಯಗಳು, ವ್ಯಾಪ್ತಿ ಮತ್ತು ಪ್ರಾರಂಭಿಸಿರುವ ಉದ್ದೇಶಗಳೇನು; (ವಿವರ ನೀಡುವುದು)	ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವನ್ನು 1956ರ ಕಂಪೆನಿ ಕಾಯ್ದೆಯ ಪ್ರಕಾರ ಅಧಿಕೃತ ಷೇರು ಬಂಡವಾಳ ರೂ. 3.0 ಕೋಟಿ ಮತ್ತು ಸಂದಾಯವಾದ ಷೇರು ಬಂಡವಾಳ ರೂ.7.12 ಲಕ್ಷಗಳೊಂದಿಗೆ ಮೀನುಗಾರರ ಶ್ರೇಯೋಭಿವೃದ್ಧಿ ಮತ್ತು ಮೀನುಗಾರಿಕಾ ಕ್ಷೇತ್ರದ ಅಭಿವೃದ್ಧಿಯ ದೃಷ್ಠಿಯಲ್ಲಿ 1970ರಲ್ಲಿ ಸ್ಥಾಪಿಸಲಾಯಿತು. ಪ್ರಸ್ತುತ, ನಿಗಮವು ರೂ.20.00 ಕೋಟಿ ಅಧಿಕೃತ ಪಾಲು ಬಂಡವಾಳ ಹೊಂದಿದ್ದು, ಸಂದಾಯವಾದ ಪಾಲು ಬಂಡವಾಳ ರೂ. 17.84 ಕೋಟಿ ಆಗಿರುತ್ತದೆ. ನಿಗಮವು ರಾಜ್ಯ ಸರ್ಕಾರದ ಉದ್ದಿಮೆಯಾಗಿರುವುದರಿಂದ ರಾಜ್ಯಾದ್ಯಂತ ಕಾರ್ಯವ್ಯಾಪ್ತಿಯನ್ನು ಹೊಂದಿರುತ್ತದೆ. **ನಿಗಮದ ಧ್ಯೇಯ** • ಸಾರ್ವಜನಿಕರಿಗೆ ಸಸಾರಜನಕಯುಕ್ತ ಮೀನು ಹಾಗೂ ಮೀನಿನ ಉತ್ಪನ್ನಗಳನ್ನು ಒದಗಿಸುವುದು. • ಎಲ್ಲಾ ಚಟುವಟಿಕೆಗಳಲ್ಲಿ ಸಮಗ್ರ ಗುಣಮಟ್ಟ ನಿರ್ವಹಣೆ ನೀತಿಯನ್ನು ಅನುಸರಿಸುವುದು. • ಪರಿಸರ ಸ್ನೇಹಿ ವಾತಾವರಣವನ್ನು ಸೃಷ್ಟಿಸುವುದು ಹಾಗೂ ಸಾಮಾಜಿಕ ಕಳಕಳಿ ಹೊಂದಿರುವುದು. • ನಿರಂತರ ಆವಿಷ್ಕಾರ ಹಾಗೂ ಅಭಿವೃದ್ಧಿ ಪಥದೆಡೆಗೆ ಸಾಗುವುದು. • ಗ್ರಾಹಕರಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಸೇವೆ ಒದಗಿಸುವುದು **ನಿಗಮದ ಉದ್ದೇಶಗಳು:** • ರಾಜ್ಯದ ಪ್ರಮುಖ ನಗರಗಳಲ್ಲಿ ಆಧುನಿಕ ಸಮಗ್ರ ಮೀನು ಮಾರಾಟ ಮತ್ಸ್ಯದರ್ಶಿನಿ ಮಳಿಗೆಗಳನ್ನು ತೆರೆದು ಅಲ್ಲಿ ಸಾರ್ವಜನಿಕರಿಗೆ ಉತ್ತಮ ನೈರ್ಮಲ್ಯಕರ ವಾತಾವರಣದಲ್ಲಿ ತಾಜಾ, ಘನೀಕೃತ ಮೀನು, ಮೀನಿನ ಮೌಲ್ಯವರ್ಧಿತ ಉತ್ಪನ್ನಗಳು, ಅಲಂಕಾರಿಕಾ ಮೀನು ಹಾಗೂ ಉತ್ತಮ ಗುಣಮಟ್ಟದ ಮೀನು ಉಪಾಹಾರ ಗೃಹದ ಸೇವೆಯನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಒದಗಿಸುವುದು.

		• ಗ್ರಾಹಕರಿಗೆ ತಾಜಾ ಮತ್ತು ಘನೀಕೃತ ಮೀನು ಮತ್ತು ಮೀನಿನ ಉತ್ಪನ್ನಗಳನ್ನು ಉತ್ತಮ ಸ್ಥಿತಿಯಲ್ಲಿ ಹಾಗೂ ನೈರ್ಮಲ್ಯಕರ ವಾತಾವರಣದಲ್ಲಿ ಒದಗಿಸಬೇಕಾದ ಶೀತಲ ಸರಪಣಿ ಸ್ಥಾಪಿಸಿ ನಿರ್ವಹಿಸುವುದು. • ತಾಜಾ ಮತ್ತು ಘನೀಕೃತ ಮೀನು ಹಾಗೂ ಮೀನಿನ ಉತ್ಪನ್ನಗಳನ್ನು ರಫ್ತು ಮಾಡಲು ಬೇಕಾದ ಮೀನು ಸಂಸ್ಕರಣ ಮತ್ತು ಮೀನು ಸಂಸ್ಕರಣ ಪೂರ್ವ ಸ್ಥಾವರಗಳ ಸೌಲಭ್ಯಗಳನ್ನು ಒದಗಿಸುವುದು. • ಮಂಜುಗಡ್ಡೆ, ಡೀಸೆಲ್ ಮತ್ತು ಮೀನುಗಾರಿಕಾ ಸಲಕರಣೆಗಳನ್ನು ಮೀನುಗಾರರಿಗೆ ಕಡಿಮೆ ಬೆಲೆಯಲ್ಲಿ ಪೂರೈಕೆ ಮಾಡುವುದು. • ಮೀನುಗಾರರು ಪರ್ಸೀನ್ ಬೋಟ್‌ಗಳ ಮೂಲಕ ಹಿಡಿದ ಮೀನನ್ನು ನಿಗಮದ ವತಿಯಿಂದ ಮಾರಾಟ ಮಾಡುವುದರಿಂದ, ಮೀನುಗಾರರಿಗೆ ಉತ್ತಮ ಬೆಲೆ ಲಭ್ಯವಾಗಿಸುವಿಕೆ. • ಮೀನು ಆಹಾರ (ಮೀನು ಹುಡಿ) ಮತ್ತು ಮೀನು ಎಣ್ಣೆ ಉತ್ಪಾದನೆಗೆ ಬೇಕಾದ ಸೌಲಭ್ಯ ಒದಗಿಸುವುದು. • ಮೀನುಗಾರಿಕೆ ಇಲಾಖೆಯ ಮತ್ಸ್ಯಾಶ್ರಯ ವಸತಿ ಯೋಜನೆ, ಸುಸಜ್ಜಿತ ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಇತರೆ ಯೋಜನೆಗಳನ್ನು ನಿಗಮದ ಮುಖಾಂತರ ಅನುಷ್ಠಾನಗೊಳಿಸುವುದು. • ಅಲಂಕಾರಿಕಾ ಮೀನು ಅಕ್ವೇರಿಯಂ ಹಾಗೂ ಸಲಕರಣೆಗಳ ಮಾರಾಟ. • ವಿವಿಧ ಮತ್ಸ್ಯಮೇಳ ಮತ್ತು ಇತರೆ ವಸ್ತುಪ್ರದರ್ಶನಗಳಲ್ಲಿ ಭಾಗವಹಿಸಿ ಮೀನು ಸೇವನೆಯನ್ನು ಜನಪ್ರಿಯಗೊಳಿಸುವುದು. • ಆನ್‌ಲೈನ್ ಮುಖಾಂತರ ಮೀನು ಹಾಗೂ ಮೀನಿನ ಮೌಲ್ಯ ವರ್ಧಿತ ಉತ್ಪನ್ನಗಳನ್ನು ಗ್ರಾಹಕರ ಮನೆಗೆ ಒದಗಿಸುವುದು. • ಮೀನುಗಾರಿಕೆಗೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳನ್ನು ಮೀನುಗಾರರಿಗೆ ಒದಗಿಸುವುದು.
ಆ)	ಈ ನಿಗಮದಡಿ ಒಟ್ಟು ಎಷ್ಟು ಘಟಕಗಳು ಕಾರ್ಯನಿರ್ವಹಿಸುತ್ತಿವೆ; ಕಳೆದ ಮೂರು ವರ್ಷಗಳಿಂದ ಲಾಭ ನಷ್ಟ ಅನುಭವಿಸು ತ್ತಿರುವ ಘಟಕಗಳು ಯಾವುವು; (ನಿಗಮವು ಘಟಕವಾರು ಲಾಭ ನಷ್ಟದ ವಿವರಗಳನ್ನು	ನಿಗಮವು ಒಟ್ಟು 9 ಘಟಕಗಳ ಮುಖಾಂತರ ಕಾರ್ಯನಿರ್ವಹಿಸುತ್ತಿದೆ. 1. ಮಂಗಳೂರು ಘಟಕ, ಮೀನುಗಾರಿಕೆ ಬಂದರು, ಮಂಗಳೂರು 2. ಮೀನು ಸರಬರಾಜು ಘಟಕ, ಕೇಂದ್ರ ಕಚೇರಿ, ಮಂಗಳೂರು 3. ಮಲ್ಪೆ ಘಟಕ, ಮೀನುಗಾರಿಕೆ ಬಂದರು, ಮಲ್ಪೆ 4. ಗಂಗೊಳ್ಳಿ ಘಟಕ, ಮೀನುಗಾರಿಕೆ ಬಂದರು, ಗಂಗೊಳ್ಳಿ 5. ಭಟ್ಕಳ ಘಟಕ, ಮಾವಿನಕುರ್ವೆ, ಭಟ್ಕಳ 6. ಹೊನ್ನಾವರ ಘಟಕ, ಮೀನುಗಾರಿಕೆ ಬಂದರು, ಹೊನ್ನಾವರ 7. ತದಡಿ ಘಟಕ, ಮೀನುಗಾರಿಕೆ ಬಂದರು, ತದಡಿ

ನೀಡುವುದು) ನಷ್ಟ ಅನುಭವಿಸುತ್ತಿದ್ದಲ್ಲಿ ಕಾರಣಗಳೇನು; ನಷ್ಟ ಅನುಭವಿಸುತ್ತಿರುವ ಘಟಕಗಳನ್ನು ಲಾಭದತ್ತ ಕೊಂಡೊಯ್ಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

8. ಕಾರವಾರ ಘಟಕ, ಮೀನುಗಾರಿಕೆ ಬಂದರು, ಕಾರವಾರ
9. ಮತ್ಸ್ಯದರ್ಶಿನಿ, ಕಬ್ಬನ್‌ಪಾರ್ಕ್-ಬೆಂಗಳೂರು

ಮೀನು ಸರಬರಾಜು ಘಟಕ, ಕೇಂದ್ರ ಕಚೇರಿ, ಮಂಗಳೂರು ಇದರ ವ್ಯಾಪ್ತಿಯಲ್ಲಿ ಮಂಗಳೂರಿನ ಚಿಲಿಂಬಿ, ಶಿವಮೊಗ್ಗ-1, ಶಿವಮೊಗ್ಗ-2, ತುಮಕೂರು, ಹಾಸನ ಮತ್ತು ಮೈಸೂರು-ಗೋಕುಲಂ ಮೀನು ಮಾರಾಟ ಮಳಿಗೆಗಳು ಮತ್ತು ಮೊಬೈಲ್ ಮೀನು ಉಪಹಾರ ಗೃಹ ವಾಹನ ಹಾಗೂ ಇತರೆ 15 ಏಜೆನ್ಸಿಗಳು ಒಳಗೊಂಡಿರುತ್ತವೆ.

ಮತ್ಸ್ಯದರ್ಶಿನಿ ಕಬ್ಬನ್‌ಪಾರ್ಕ್-ಬೆಂಗಳೂರು ಇದರ ವ್ಯಾಪ್ತಿಯಲ್ಲಿ ಕೋಲಾರ, ಮೊಬೈಲ್ ಮೀನು ಮಾರಾಟ ವಾಹನ ಹಾಗೂ ಇತರೆ 16 ಮತ್ಸ್ಯದರ್ಶಿನಿ ಏಜೆನ್ಸಿಗಳು ಒಳಗೊಂಡಿರುತ್ತವೆ.

ಕಳೆದ ಮೂರು ವರ್ಷಗಳಲ್ಲಿ ಲಾಭ / ನಷ್ಟ ಅನುಭವಿಸುತ್ತಿರುವ ಘಟಕಗಳು ಹಾಗೂ ಲಾಭ / ನಷ್ಟದ ವಿವರ ಈ ಕೆಳಗಿನಂತಿದೆ. (ಲಾಭ + ನಷ್ಟ -)

ಕ್ರ. ಸಂ	ಘಟಕಗಳ ವಿವರ	ಕಳೆದ ಮೂರು ವರ್ಷಗಳ ಲಾಭ/ನಷ್ಟದ ವಿವರ (ರೂ. ಲಕ್ಷಗಳಲ್ಲಿ)		
		2017-18	2018-19	2019-20
1	ಮಂಗಳೂರು ಘಟಕ	316.91(+)	377.65(+)	187.94(+)
2	ಮೀನು ಸರಬರಾಜು ಘಟಕ, ಕೇಂದ್ರ ಕಚೇರಿ, ಮಂಗಳೂರು	10.98(-)	48.72(-)	71.30(-)
3	ಮಲ್ಪೆ ಘಟಕ	178.23(+)	190.69(+)	135.08(+)
4	ಗಂಗೊಳ್ಳಿ ಘಟಕ	55.41(+)	38.29(+)	19.05(+)
5	ಭಟ್ಕಳ ಘಟಕ	85.70(+)	35.94(+)	11.34(+)
6	ಹೊನ್ನಾವರ ಘಟಕ	12.16(+)	4.69(-)	14.57(-)
7	ತದಡಿ ಘಟಕ	71.28(+)	84.73(+)	35.36(+)
8	ಕಾರವಾರ ಘಟಕ	5.35(+)	7.47(-)	15.12(-)
9	ಮತ್ಸ್ಯದರ್ಶಿನಿ, ಕಬ್ಬನ್‌ಪಾರ್ಕ್-ಬೆಂಗಳೂರು	75.15(+)	76.28(+)	59.68(+)

ಮಂಗಳೂರು ಮೀನು ಸರಬರಾಜು ಘಟಕ, ಹೊನ್ನಾವರ ಪರ್ಸಿನ್ ಮೀನು ಮಾರಾಟ ಘಟಕ ಮತ್ತು ಕಾರವಾರ ಡೀಸೆಲ್ ಹಾಗೂ ಮಂಜುಗಡ್ಡೆ ಮಾರಾಟ ಘಟಕಗಳು ಪ್ರಸಕ್ತ ನಷ್ಟದಲ್ಲಿರುತ್ತವೆ.

ಮಂಗಳೂರು ಹಾಗೂ ಹೊನ್ನಾವರ ಘಟಕಗಳಲ್ಲಿ ಮೀನಿನ ವ್ಯಾಪಾರ ವಹಿವಾಟು ಕುಂಠಿತವಾದ ಕಾರಣ ಈ ಘಟಕಗಳು ನಷ್ಟದಲ್ಲಿರುತ್ತವೆ. ಕಾರವಾರ ಘಟಕದಲ್ಲಿ ಮಂಜುಗಡ್ಡೆ ಮಾರಾಟ ವಹಿವಾಟು ಕುಂಠಿತವಾದ ಕಾರಣ ಈ ಘಟಕವು ನಷ್ಟದಲ್ಲಿರುತ್ತದೆ.

		ಮಂಗಳೂರು ಮತ್ತು ಹೊನ್ನಾವರ ಘಟಕಗಳಲ್ಲಿ ಮೀನು ಮಾರಾಟ ವಹಿವಾಟನ್ನು ಹೆಚ್ಚಿಸಿ ಲಾಭದಾಯಕವಾಗಿ ನಡೆಸಲು ಕ್ರಮವಹಿಸುವಂತೆ ಘಟಕಗಳ ಮುಖ್ಯಸ್ಥರುಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗಿದೆ. ಕಾರವಾರ ಮತ್ತು ಹೊನ್ನಾವರ ಘಟಕಗಳನ್ನು ಲಾಭದಾಯಕವಾಗಿಸುವ ನಿಟ್ಟಿನಲ್ಲಿ ಇವುಗಳಲ್ಲಿನ ಮಂಜುಗಡ್ಡೆ ಉತ್ಪಾದನಾ ಘಟಕಗಳನ್ನು ಈಗಾಗಲೇ ನಿಯಮಾನುಸಾರ ಟೆಂಡರ್ ಕರೆದು ಖಾಸಗೀಯವರಿಗೆ ಗುತ್ತಿಗೆ ನೀಡಲಾಗಿದೆ.
ಇ)	ಈ ನಿಗಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ನೌಕರರ ಸಂಖ್ಯೆ ಎಷ್ಟು; ಅವರಲ್ಲಿ ಖಾಯಂ, ಹಂಗಾಮಿ, ದಿನಗೂಲಿ, ತಾತ್ಕಾಲಿಕ ಹಾಗೂ ಎರವಲು ಸೇವೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; (ಹುದ್ದೆಯ ವಿವರದೊಂದಿಗೆ ಮಂಜೂರಾತಿ, ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಬಗ್ಗೆ ಮಾಹಿತಿ ನೀಡುವುದು)	ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ನೌಕರರ ಸಂಖ್ಯೆ: 220 (82+138.) ಖಾಯಂ ನೌಕರರು 82, ಇದರಲ್ಲಿ 2 ನೌಕರರು ಎರವಲು ಸೇವೆಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದಾರೆ ಹಾಗೂ ಒರ್ವ ನೌಕರ ರಿಟೈನರ್ (retainership) ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹೊರಗುತ್ತಿಗೆ / ಗುತ್ತಿಗೆ ಆಧಾರದಲ್ಲಿ 138 ಮಂದಿ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಿಗಮದಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳನ್ನು **<u>ಅನುಬಂಧ-1</u>**ರಲ್ಲಿ ನೀಡಲಾಗಿದೆ.
ಈ)	ರಾಜ್ಯದಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು ನಿಗಮದ ವತಿಯಿಂದ ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು; ಈ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಮೀನುಗಾರಿಕೆ ವಲಯವನ್ನು ಅಭಿವೃದ್ಧಿಗೊಳಿಸುವ ಹಾಗೂ ಮತ್ಸ್ಯಾಹಾರವನ್ನು ಜನಪ್ರಿಯಗೊಳಿಸಲು ಮೀನುಗಾರಿಕೆ ಅಭಿವೃದ್ಧಿ ನಿಗಮವು ಹಮ್ಮಿಕೊಂಡಿರುವ ಕ್ರಿಯಾ ಯೋಜನೆಗಳು ಈ ಕೆಳಗಿನಂತಿದೆ:- 1. ನಿಗಮವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರಾಜ್ಯದಲ್ಲಿ ಒಟ್ಟು 21 ಹವಾನಿಯಂತ್ರಿತ ಮೀನು ಮಾರಾಟ ಮಳಿಗೆ ಮತ್ಸ್ಯದರ್ಶಿನಿ ಉಪಹಾರ ಗೃಹಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಮೀನು ಹಾಗೂ ಮೀನಿನ ಉತ್ಪನ್ನಗಳನ್ನು ಸರಬರಾಜು ಮಾಡಲಾಗುತ್ತಿದೆ. 2. ನಿಗಮವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮಂಗಳೂರಿನಲ್ಲಿ ಯೂರೋಪಿಯನ್ ಒಕ್ಕೂಟ ರಾಷ್ಟ್ರಗಳಿಗೆ ಮೀನು ರಫ್ತು ಮಾಡುವ ಪರವಾನಿಗೆ ಹೊಂದಿರುವ ಆಧುನಿಕ ಮೀನು ಸಂಸ್ಕರಣಾ ಸ್ಥಾವರವನ್ನು ನಿರ್ಮಿಸಿದೆ.

		ಹೊನ್ನಾವರ ಮೀನುಗಾರಿಕೆ ಬಂದರಿನಲ್ಲಿ ಮತ್ತು ಕಾರವಾರ ಮೀನುಗಾರಿಕೆ ಬಂದರಿನಲ್ಲಿ ಮೀನಿನ ಹಿಡುವಳಿ ತುಂಬಾ ಕಡಿಮೆಯಾಗಿರುವುದರಿಂದ ಯಾಂತ್ರಿಕೃತ ಮೀನುಗಾರಿಕಾ ದೋಣಿಗಳು ಹೆಚ್ಚಿನ ಸಮಯ ಮೀನುಗಾರಿಕೆಗೆ ತೆರಳದೇ ಇರುವುದರಿಂದ ನಿಗಮದ ಹೊನ್ನಾವರ ಮತ್ತು ಕಾರವಾರ ಘಟಕಗಳು ನಷ್ಟವನ್ನು ಹೊಂದಿರುತ್ತವೆ. 2020-21ನೇ ಸಾಲಿನಲ್ಲಿ ಸದ್ರಿ ಘಟಕಗಳನ್ನು ಲಾಭದಾಯಕವನ್ನಾಗಿ ಮಾಡುವ ಬಗ್ಗೆ ಘಟಕದ ಮುಖ್ಯಸ್ಥರ ಸಭೆಯನ್ನು ಕರೆದು ಘಟಕವನ್ನು ಲಾಭದಾಯಕವನ್ನಾಗಿ ಮಾಡಲು ಕ್ರಮಕೈಗೊಳ್ಳಲು ಸೂಚಿಸಲಾಗಿದೆ. ನಿಗಮದಲ್ಲಿ ನಷ್ಟ ಹೊಂದುತ್ತಿರುವ ಘಟಕಗಳನ್ನು ಖಾಸಗಿಯವರಿಗೆ ನಿಯಮಾನುಸಾರ ಲೈಸೆನ್ಸ್ ಮೇಲೆ ನಡೆಸಲು ನೀಡಿ ಲಾಭದಾಯಕವನ್ನಾಗಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುತ್ತಿದೆ.
ಇ)	ಈ ನಿಗಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ನೌಕರರ ಸಂಖ್ಯೆ ಎಷ್ಟು; ಅವರಲ್ಲಿ ಖಾಯಂ, ಹಂಗಾಮಿ, ದಿನಗೂಲಿ, ತಾತ್ಕಾಲಿಕ ಹಾಗೂ ಎರವಲು ಸೇವೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; (ಹುದ್ದೆಯ ವಿವರದೊಂದಿಗೆ ಮಂಜೂರಾತಿ, ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಬಗ್ಗೆ ಮಾಹಿತಿ ನೀಡುವುದು)	ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ನೌಕರರ ಸಂಖ್ಯೆ: 220 (82+138.) ಖಾಯಂ ನೌಕರರು 82, ಇದರಲ್ಲಿ 2 ನೌಕರರು ಎರವಲು ಸೇವೆಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದಾರೆ ಹಾಗೂ ಒರ್ವ ನೌಕರ ರಿಟೈನರ್ (retainership) ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹೊರಗುತ್ತಿಗೆ / ಗುತ್ತಿಗೆ ಆಧಾರದಲ್ಲಿ 138 ಮಂದಿ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಿಗಮದಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.
ಈ)	ರಾಜ್ಯದಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು ನಿಗಮದ ವತಿಯಿಂದ ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು; ಈ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಮೀನುಗಾರಿಕೆ ವಲಯವನ್ನು ಅಭಿವೃದ್ಧಿಗೊಳಿಸುವ ಹಾಗೂ ಮತ್ಸ್ಯಾಹಾರವನ್ನು ಜನಪ್ರಿಯಗೊಳಿಸಲು ಮೀನುಗಾರಿಕೆ ಅಭಿವೃದ್ಧಿ ನಿಗಮವು ಹಮ್ಮಿಕೊಂಡಿರುವ ಕ್ರಿಯಾ ಯೋಜನೆಗಳು ಈ ಕೆಳಗಿನಂತಿದೆ:- 1. ನಿಗಮವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರಾಜ್ಯದಲ್ಲಿ ಒಟ್ಟು 21 ಹವಾನಿಯಂತ್ರಿತ ಮೀನು ಮಾರಾಟ ಮಳಿಗೆ ಮತ್ಸ್ಯದರ್ಶಿನಿ ಉಪಹಾರ ಗೃಹಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಮೀನು ಹಾಗೂ ಮೀನಿನ ಉತ್ಪನ್ನಗಳನ್ನು ಸರಬರಾಜು ಮಾಡಲಾಗುತ್ತಿದೆ. 2. ನಿಗಮವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮಂಗಳೂರಿನಲ್ಲಿ ಯೂರೋಪಿಯನ್ ಒಕ್ಕೂಟ ರಾಷ್ಟ್ರಗಳಿಗೆ ಮೀನು ರಫ್ತು ಮಾಡುವ ಪರವಾನಿಗೆ ಹೊಂದಿರುವ ಆಧುನಿಕ ಮೀನು ಸಂಸ್ಕರಣಾ ಸ್ಥಾವರವನ್ನು ನಿರ್ಮಿಸಿದೆ.

- ರಾಜ್ಯ ಸರಕಾರವು ನಿಗಮವನ್ನು ಮೀನುಗಾರಿಕೆ ಇಲಾಖೆಯ ಮತ್ಸ್ಯಾಶ್ರಯ ಯೋಜನೆಯ ಅನುಷ್ಠಾನದ ನೋಡಲ್ ಏಜೆನ್ಸಿಯಾಗಿ ನೇಮಿಸಿದ್ದು, ನಿಗಮದ ಮುಖಾಂತರ ಮತ್ಸ್ಯಾಶ್ರಯ ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುತ್ತಿದೆ.

- ಮೀನುಗಾರಿಕೆ ಇಲಾಖೆಯ ಮತ್ಸ್ಯಜೋಪಾಸನೆ ಯೋಜನೆಯಡಿ ರಾಜ್ಯದ 20 ಮೀನು ಮಾರುಕಟ್ಟೆ ಸ್ಥಳಗಳಲ್ಲಿ 2 ಟನ್ ಸಾಮರ್ಥ್ಯದ ಶೀತಲೀಕರಣ ಘಟಕ ನಿರ್ಮಾಣವನ್ನು ನಿಗಮದಿಂದ ಕೈಗೊಳ್ಳಲಾಗಿದೆ.

- ನಿಗಮವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ದ.ಕ.ಜಿಲ್ಲೆಯ ಬಜಪೆ, ಕೆಮ್ರಾಲ್, ಮಂಗಳಾಪೇಟೆ, ಸಿದ್ದಕಟ್ಟೆ, ಮಾಣಿ, ಗಂಜಿಮಠ ಉಡುಪಿ ಜಿಲ್ಲೆಯ ವಾರಂಬಳ್ಳಿ, ಮೂಡುಬೆಳ್ಳೆ, ಹೆಜಮಾಡಿ, ಕೋಟೇಶ್ವರ, ಹುಣ್ಸೆಮಕ್ಕಿ, ಕುಂಜಿಬೆಟ್ಟು, ಸಂತೆಕಟ್ಟೆ, ಪರ್ಕಳ, ಬಸ್ರೂರು, ಅಮಾಸೆಬೈಲ್, ಗಂಗೊಳ್ಳಿ, ಕಂಡ್ಲೂರು, ಅಂಪಾರು ಮತ್ತು ಅಂಬಾಗಿಲು ಹಾಗೂ ಉತ್ತರ ಕನ್ನಡ ಜಿಲ್ಲೆಯ ಕೋಡಿಬಾಗ್, ಅಮದಳ್ಳಿ, ಅವರ್ಸಾ ಹಾಗೂ ಹೆಬಳೆಯಲ್ಲಿ ಸೇರಿ ಒಟ್ಟು 24 ಸುಸಜ್ಜಿತ ಮೀನು ಮಾರುಕಟ್ಟೆಗಳನ್ನು ನಿರ್ಮಿಸಿ ಆಯಾ ಗ್ರಾಮ ಪಂಚಾಯತ್‌ಗಳಿಗೆ ನಿರ್ವಹಣೆಗಾಗಿ ಹಸ್ತಾಂತರಿಸಲಾಗಿದೆ.

- ನಬಾರ್ಡ್ ಆರ್‌ಐಡಿಎಫ್ ಯೋಜನೆ/ಎನ್‌ಎಫ್‌ಡಿಬಿ ಯೋಜನೆ / ರಾಜ್ಯ ಸರಕಾರದ ಯೋಜನೆಯಡಿ ನಿಗಮದಿಂದ ದ.ಕ. ಜಿಲ್ಲೆಯ ಸುಳ್ಯ, ಉಡುಪಿ ಜಿಲ್ಲೆಯ ತೆಕ್ಕಟ್ಟೆ, ಸಾಸ್ತಾನ, ಶಿವಮೊಗ್ಗ ಜಿಲ್ಲೆಯ ಸಾಗರ, ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ, ರಾಯಚೂರು ಜಿಲ್ಲೆಯ ಸಿಂಧನೂರು, ವಿಜಾಪುರ ಜಿಲ್ಲೆಯ ಇಂಡಿ, ಬಳ್ಳಾರಿ ಜಿಲ್ಲೆಯ ಸಿರಗೊಪ್ಪ, ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ಯಾದಗಿರಿಯಲ್ಲಿ ಸುಸಜ್ಜಿತ ಮೀನು ಮಾರುಕಟ್ಟೆಗಳ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಿದೆ. ಇದರಲ್ಲಿ ದ.ಕ.ಜಿಲ್ಲೆಯ ಸುಳ್ಯ, ಉಡುಪಿ ಜಿಲ್ಲೆಯ ತೆಕ್ಕಟ್ಟೆ ಮತ್ತು ಸಾಸ್ತಾನದ ಮೀನು ಮಾರುಕಟ್ಟೆ ಕಾಮಗಾರಿ ಪೂರ್ಣಗೊಂಡಿದ್ದು, ಫಲಾನುಭವಿಗಳ ಉಪಯೋಗಕ್ಕಾಗಿ ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸಲಾಗಿದೆ. ಉಳಿದ ಕಡೆಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ.

- ಭಾರತ ಸರ್ಕಾರದ ವಾಣಿಜ್ಯ ಮಂತ್ರಾಲಯದ ಟೈಸ್ ಯೋಜನೆಯಡಿ ಹಾಗೂ ರಾಜ್ಯ ಸರ್ಕಾರದ ಕೈಗಾರಿಕಾ ಇಲಾಖೆಯ ಅನುದಾನದಡಿ ತದಡಿ ಮೀನುಗಾರಿಕಾ ಬಂದರಿನಲ್ಲಿ ಐರೋಪ್ಯ ಒಕ್ಕೂಟ ರಾಷ್ಟ್ರಗಳಿಗೆ ಮೀನು ರಫ್ತು ಮಾಡುವ ಪರವಾನಿಗೆ ಹೊಂದಿರುವ ಸಮುದ್ರೋತ್ಪನ್ನ ರಫ್ತು ಸಂಸ್ಕರಣಾ ಘಟಕ ನಿರ್ಮಾಣದ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

		• ಮೀನುಗಾರಿಕೆ ಇಲಾಖೆಯ ಅನುದಾನದಡಿ ಮಂಗಳೂರು ಮತ್ತು ಮಲ್ಪೆ ಮೀನುಗಾರಿಕೆ ಬಂದರಿನಲ್ಲಿ ತಲಾ ಒಂದು ಕಾಂಕ್ರೀಟ್ ತೇಲುವ ಜೆಟ್ಟಿ ನಿರ್ಮಾಣ ಯೋಜನೆಯನ್ನು ನಿಗಮದ ಮುಖಾಂತರ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ. • ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ದ.ಕ. ಜಿಲ್ಲೆಯ ಹಳೆಯಂಗಡಿ ಮತ್ತು ಬೆಳಗಾವಿ ನಗರದಲ್ಲಿ ಸುಸಜ್ಜಿತ ಮೀನು ಮಾರುಕಟ್ಟೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಸಂಖ್ಯೆ: ಪಸಂಮೀ ಇ-41 ಮೀಇಯೋ 2021

(ಎಸ್ ಅಂಗಾರ)
ಮೀನುಗಾರಿಕೆ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಹೆಚ್.ಎಂ.ರಮೇಶಗೌಡ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ: 310 ಕ್ಕೆ

ಅನುಬಂಧ-1

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿ., ಮಂಗಳೂರು ಈ ಸಂಸ್ಥೆಯಲ್ಲಿ ಮಂಜೂರಾದ, ಕರ್ತವ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ.

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳು	ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ	ಖಾಲಿ ಇರುವ ಹುದ್ದೆಗಳು
	'ಎ' ವೃಂದ			
1	ವ್ಯವಸ್ಥಾಪಕ ನಿರ್ದೇಶಕರು	1	1	-
2	ಪ್ರಧಾನ ವ್ಯವಸ್ಥಾಪಕರು	1	-	1
3	ಕಂಪೆನಿ ಸೆಕ್ರೆಟರಿ	1	1	-
3	ಕಂಪೆನಿ ಸೆಕ್ರೆಟರಿ	1	1	-
4	ಲೆಕ್ಕಪತ್ರಾಧಿಕಾರಿ	1	-	1
5	ಹಿರಿಯ ಕಾರ್ಯನಿರ್ವಾಹಕರು	3	1	2
	ಒಟ್ಟು:	7	3	4
	'ಬಿ' ವೃಂದ			
6	ಕಾರ್ಯನಿರ್ವಾಹಕರು	12	6	6
7	ಕಾರ್ಯನಿರ್ವಾಹಕರು(ಹೆಚ್.ಆರ್.ಡಿ)	1	-	1
8	ಆಡಿಟ್ ಕಾರ್ಯನಿರ್ವಾಹಕರು	2	-	2
9	ಸಹಾಯಕ ಅಭಿಯಂತರರು	1	1	-
	ಒಟ್ಟು	16	7	9
	'ಸಿ' ವೃಂದ			
10	ಸಹಾಯಕ ಕಾರ್ಯನಿರ್ವಾಹಕರು	16	-	16
11	ಸಹಾಯಕ ಕಾರ್ಯನಿರ್ವಾಹಕರು(ಲೀಗಲ್)	1	-	1
12	ಸಹಾಯಕ ಲೆಕ್ಕಪತ್ರ ಕಾರ್ಯನಿರ್ವಾಹಕರು	3	-	3
13	ಸಂಸ್ಕರಣ ತಂತ್ರಜ್ಞರು	3	-	3
14	ಅಧೀಕ್ಷಕರು(ಹೆಚ್.ಆರ್.ಡಿ)	1	-	1
15	ಅಧೀಕ್ಷಕರು(ಕಚೇರಿ)	1	1	-
16	ಹಿರಿಯ ಯಾಂತ್ರಿಕ ಸಹಾಯಕರು	15	2	13
17	ವಾಹನ ಮೇಲ್ವಿಚಾರಕರು	1	-	1
18	ಹಿರಿಯ ಮಾರಾಟ ಸಹಾಯಕರು	20	5	15
19	ಹಿರಿಯ ಲೆಕ್ಕಪತ್ರ ಸಹಾಯಕರು	13	4	9
20	ಹಿರಿಯ ಬೆರಳಚ್ಚುಗಾರರು	3	3	-
21	ಹಿರಿಯ ವಾಹನ ಚಾಲಕರು	1	-	1

22	ಹಿರಿಯ ಅಡುಗೆಯವರು	5	3	2
23	ಕಿರಿಯ ಯಾಂತ್ರಿಕ ಸಹಾಯಕರು	20	4	16
24	ಕಿರಿಯ ಲೆಕ್ಕಪತ್ರ ಸಹಾಯಕರು	25	1	24
25	ಕಿರಿಯ ಮಾರಾಟ ಸಹಾಯಕರು	55	28	27
26	ಬೆರಳಚ್ಚುಗಾರರು/ಕಂಪ್ಯೂಟರ್ ಆಪರೇಟರ್	3	-	3
27	ವಾಹನ ಚಾಲಕರು	7	2	5
28	ಅಡುಗೆಯವರು	5	-	5
	ಒಟ್ಟು	198	53	145
'ಡಿ' ವೃಂದ				
29	ಸ್ಥಾವರ ಸಹಾಯಕರು	20	7	13
30	ಅಟೆಂಡರ್	4	1	3
31	ವಾಹನ ಶುಚಿಗಾರರು	2	1	1
32	ಮಹಿಳಾ ಸಹಾಯಕರು	5	5	-
33	ಹರಾಜುಗಾರರು	4	1	3
34	ಉಪಹಾರಗೃಹ ಸಹಾಯಕರು	6	4	2
	ಒಟ್ಟು	41	19	22
	ಎಲ್ಲಾ ಒಟ್ಟು	262	82	180

****